ಶ್ರೀ ಜೆ. ಬಿ. ಮಲ್ಲಾರಾಧ್ಯ.-ಗ್ರಾಮವಾಸಿಗಳಿಗೆ ಹಿಂದೆ ತಹಸೀಲ್‌ದಾರರು ನಾಲ್ಕು ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಬೇಕೆಂಬುದಾಗಿಯೂ, ಸರ್ಕಾರದವರು ಈಗಿನ ಅಂದಾಜಿನ ಪ್ರಕಾರ 8 ಸಾವಿರ ರೂಪಾಯಿಗಳನ್ನು ಮತ್ತೆ ಕಾಂಟ್ರಿ ಬ್ಯೂಷನ್ ಮೂಲಕ ಕೊಡ ಬೇಕೆಂಬುದಾಗಿಯೂ ಯಾವ ಆಧಾರದ ಮೇಲೆ ಕೇಳಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆ ನಾಲ್ಕು ಸಾವಿರ ರೂಪಾಯಿಗಳು ಬೇಕಾಗುತ್ತದೆಂದು ಮಾಡಿದ ಅಂದಾಜಿನ ಆಧಾರದ ಮೇಲೆ ಹೇಳಿದ್ದು ಈಗಿನ ಅಂದಾಜು ಸ್ವಲ್ಪ ಜಾಸ್ತಿಯಾಗಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಆ ಗ್ರಾಮ ನಿವಾಸಿಗಳಿಂದ ಕಾಂಟ್ರಿಬ್ಯೂಷನ್ ಈಗಾಗಲೇ ವಸೂಲು ಮಾಡಿರುವುದರಿಂದ ದೇವಸ್ಥಾನ ನಿರ್ಮಾಣ ಕಾರ್ಯಕ್ಕೆ ಈಗಲಾದರೂ ಸಿದ್ಧರಾಗಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯತ್ನ ಮಾಡುತ್ತಿದ್ದೇವೆ.

OPENING OF A GOVERNMENT HIGH SCHOOL AT HONNAVALLY IN TIPTUR TALUK

*Q.—750. Sri K. P. REVANNASIDDAPPA.—(Tiptur)

Will the Government be pleased to state :—

(*a*) whether they are aware that the villagers of Honnavally Hobli in Tiptur Taluk are praying for a High School at Honnavally ;

(*b*) the distance from Honnavally village to the nearest High School ;

(*c*) whether they intend to sanction a High School to this area in view of its very backwardness ?

A.—Sri ANNARAO GANAMUKHI (Minister for Education).—

(*a*) Yes.

(*b*) 10 miles from Tiptur, 12 miles from Arsikere.

(*c*) No. The policy of Government is to open a Government High School in a Taluka where there is not even one High School.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹೊನ್ನವಳ್ಳಿ ತಿಪ್ಪಟೂರಿನಿಂದ ಪ್ರೌಢಶಾಲೆಗೆ ಬರಬೇಕಾದರೆ 10 ಮೈಲಿಗಳು ಎಂಬುದಾಗಿ ನನ್ನ (ಬಿ) ಪ್ರಶ್ನೆಗೆ ಉತ್ತರ ಹೇಳಿದ್ದಿರಿ, ಶಾಲೆಗೆ ಯಾವ ಕಡೆಯಿಂದ ಬರಬೇಕು.

† ಶ್ರೀ ಅಣ್ಣಾರಾವ್ ಗಣಮುಖಿ.—ಯಾವ ಕಡೆಯಿಂದ ಎಂಬುದು ತಮಗೇ ಗೊತ್ತು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ರಸ್ತೆಯಲ್ಲಿ ಬರಬೇಕೊ ಅಥವಾ ಇನ್ನಾವುದಾದರೂ ದಾರಿಯನ್ನು ಕಡು ಹಿಡಿದಿದ್ದೀರೊ?

ಅಧ್ಯಕ್ಷರು.—ಅವರ ಕಡೆಯಿಂದಲೇ ಬರಬೇಕು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಹಿಂದುಳಿದ ಪ್ರದೇಶಗಳಲ್ಲಿ ಸ್ಕೂಲುಗಳನು ತೆರೆಯುವ ಬಗ್ಗೆ ಏನೇನು ಸಾಕಾರ್ಯಗಳನ್ನು ಕೊಟ್ಟಿದ್ದೀರಿ?

ಶ್ರೀ ಅಣ್ಣಾರಾವ್ ಗಣಮುಖಿ.—ಸರ್ಕಾರದ ಪಾಲಸಿ ಈ ಬಗ್ಗೆ ಏನಿದೆಯೆಂಬುದನ್ನು (ಸಿ) ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಯಾವ ತಾಲ್ಲೂಕಿನಲ್ಲಿ ಒಂದಾದರೂ ಸರ್ಕಾರಿ ಹೈಸ್ಕೂಲು ಇಲ್ಲವೋ ಆ ತಾಲ್ಲೂಕಿನಲ್ಲಿ ಸರ್ಕಾರದವರು ಹೈಸ್ಕೂಲನ್ನು ತೆರೆಯಲು ಒಪ್ಪುತಾರೆಂದು ಹೇಳಿದರು. ಹಾಗಾದರೆ ಈಗ ಇದೇ ಮಂತ್ರಿ ಮುಂದಳದವರು ಯಾವ ಸ್ಥಳಕ್ಕೆ ಹೈಸ್ಕೂಕಲನು ಕೊಟ್ಟಿದ್ದಾರೋ ಆ ತಾಲ್ಲೂಕಿನಲ್ಲಿ ಸರ್ಕಾರಿ ಹೈಸ್ಕೂಲುಗಳಲ್ಲವೇನು?

ಶ್ರೀ ಅಣ್ಣಾರಾವ್ ಗಣಮುಖಿ.—ಇಲ್ಲ

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈ ಹೊನ್ನವಳ್ಳಿಗೆ 10-12 ಮೈಲಿಗಳಲ್ಲಿ ಹೈಸ್ಕೂಲದ್ದಾಗ್ಯೂ ಈ ಗ್ರಾಮದಲ್ಲಿ ಹೈಸ್ಕೂಲಿಗೆ ಹೋಗತಕ್ಕ 500-600 ಹುಡುಗರಿದಾಗ್ಯೂ ಅಲ್ಲಿಗೆ ಒಂದು ಹೈಸ್ಕೂಲನ್ನು ಕೊಡದಿರುವುದಕ್ಕೆ ಕಾರಣವೇನು?

ಶ್ರೀ ಅಣ್ಣಾರಾವ್ ಗಣಮುಖಿ.—ಆ ತಾಲ್ಲೂಕಿನಲ್ಲಿ ಈಗಾಗಲೇ 5-6 ಹೈಸ್ಕೂಲುಗಳಿವೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಯಾರದೋ ಮನೆಯಲ್ಲಿ ದುಡ್ಡಿದ್ದರೆ ನಮಗೇನು ಬಂತು! ತಾಲ್ಲೂಕಿನಲ್ಲಿ 5-6 ಹೈಸ್ಕೂಲುಗಳಿದ್ದರೆ ಈ ಗ್ರಾಮಕ್ಕಾದ ಪ್ರಯೋಜನವೇನು?

ಶ್ರೀ ಅಣ್ಣಾರಾವ್ ಗಣಮುಖಿ.—ಆ ತಾಲ್ಲೂಕಿನಲ್ಲಿ ಈಗಾಗಲೇ ಅಲ್ಲಲ್ಲಿ ಹೆಡ್‌ಕ್ವಾರ್ಟರಿನಲ್ಲಿ ಒಂದು ಹುಡುಗರ ಮತ್ತು ಹುಡುಗಿಯರ ಹೈಸ್ಕೂಲು ಇರುವುದರಿಂದ ಅಲ್ಲಿಗೆ ಕೊಡಲಕ್ಕಾಗಲಲ್ಲ.

Sri B. S. SHANKARAPPA.—In answer to (c), the reply is "No" The policy of Government is to open a Government High School in a Taluka where there is not even one High School. Is it not a fact you have opened a high school in Kadur Taluk, where there are already three high schools?

Sri ANNARAO GANAMUKHI.—We have opened a high school in Chaulihiriyur because, they had deposited a sum of Rs. 33,000.

Sri B. S. SHANKARAPPA.—But the reply is this Sir.....

Mr. SPEAKER.—He must know that the Government was already committed to that.

ಶ್ರೀ ಎಚ್. ಜಿ. ನರಸಿಂಹೇಗೌಡ.—ಒಂದೂ ಸರ್ಕಾರಿ ಹೈಸ್ಕೂಲು ಇಲ್ಲದ ತಾಲ್ಲೂಕಿಗೆ ಸ್ಕೂಲುಕೊಡಬೇಕೆಂಬುದು ಸರ್ಕಾರದ ಪಾಲಸಿ ಎಂದು ಹೇಳುತ್ತಾ ಕಾಂಗ್ರೆಸ್‌ನವರ ಕ್ಷೇತ್ರದಲ್ಲಿ 2 ಹೈಸ್ಕೂಲುಗಳಿದ್ದರೂ ಅಲ್ಲಿಗೆ ಮತ್ತೊಂದು ಹೈಸ್ಕೂಲು ಕೊಡಲು ಕಾರಣವೇನು?

ಅಧ್ಯಕ್ಷರು.—ಯಾವ ಕಾಂಗ್ರೆಸ್ಸಿನವರ ಕ್ಷೇತ್ರದಲ್ಲಿ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಶ್ರೀ ಡಿ. ಎಚ್. ರುದ್ರಪ್ಪನವರ ಕ್ಷೇತ್ರಕ್ಕೆ ಒಂದು ಹೈಸ್ಕೂಲನ್ನು ಕೊಟ್ಟಿದ್ದಾರೆ; ಅಲ್ಲಿ 2 ಹೈಸ್ಕೂಲುಗಳು ಮೊದಲೇ ಇದ್ದವು ಹಾಗಿರುವಾಗ ಶ್ರೀ ರೇವಣ ಸಿದ್ದಪ್ಪನವರು ಕೇಳುತ್ತಿರುವ ಸ್ಥಳಕ್ಕೇಕೆ ಕೊಡಬಾರದು?

ಶ್ರೀ ಅಣ್ಣಾರಾವ್ ಗಣಮುಖಿ.—ಆಚಾರ ಹೊನೂರು ಗ್ರಾಮದವರು ಈ ಪಾಲಸಿ ಜಾರಿಗೆ ಬರುವ ಮೊದಲೇ 33 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಿದ್ದರು. ಆ ಕಾರಣದಿಂದ ಅಲ್ಲಿಗೆ ಕೊಡಲಾಗಿದ.

Sri B. S. SHANKARAPPA.—Sir, I rise to a point of order. During the Budget Session in March and April, to the very same question, the Minister has replied to Mr. Rudrappa that though they have deposited a sum of Rs. 33,000, the Government's policy is to sanction to backward areas, where high schools are less. Now,is his present reply in order?

ಶ್ರೀಅಣ್ಣಾರಾವ್ ಗಣಮುಖಿ.—ಅವರು 33 ಸಾವಿರ ರೂಪಾಯಿಗಳನು ಡೆಪಾಜಿಟ್ ಮಾಡಿದಾಗ ಸರ್ಕಾರದ ಪಾಲಸಿ ನಿರ್ಧರವಾಗಿರಲಿಲ್ಲ ಈ ಪಾಲಸಿ ನಿರ್ಧರವಾದ್ದು ಇತ್ತೀಚೆಗೆ. ಸರ್ಕಾರದವರ ಈ ಪಾಲಸಿ ನಿರ್ಧರವಾಗು ಮುದಕ್ಕೆ 2 ವರ್ಷಗಳ ಮೊದಲೇ ಅವರು ಆ ಹಣವನ್ನು

ಡಿಪಾಜಿಟ್ ಮಾಡಿದ್ದುದರಿಂದ ಅಲ್ಲಿಗೆ ಸ್ಕೂಲನ್ನು ಕೊಡಲಾಯಿತು ಆದರೆ ಇತ್ತೀಚೆಗೆ ಅಂಥ ಡಿಪಾಜಿಟ್‌ಗಳನ್ನೂ ತೆಗೆದುಕೊಳ್ಳುತ್ತಿಲ್ಲ. ಸ್ಕೂಲನ್ನೂ ಕೊಡುತ್ತಿಲ್ಲ.

ಶ್ರೀ ಎಂ. ಎಂ. ಬನವೇಗೌಡ.—ಅದು ಹೋಗಲಿ ಕಡೂರು ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ 2 ಹೈಸ್ಕೂಲುಗಳಿದ್ದರೂ ಬಾದ್ರೆಹಳ್ಳಿಗೆ ಒಂದು ಹೈಸ್ಕೂಲನ್ನು ಹೇಗೆ ಕೊಟ್ಟರು ?

ಶ್ರೀ ಅಣ್ಣಾರಾವ್ ಗಣಮುಖಿ.—ಕೇವಲ ಮೂರುಮೈಲಿ ಅಂತರದಲ್ಲಿ ಇಬ್ಬರು 33 ಸಾವಿರ ರೂಪಾಯಿಗಳ ಡಿಪಾಜಿಟ್ ಮಾಡಿರುವಾಗ ಅಪೇಕ್ಷೆ ನಾವು ಯಾರಿಗೆ ಕೊಡಬೇಕು ?

ಶ್ರೀ ಎಂ. ಎಂ. ಬನವೇಗಾಡ.—ಈಗ ಕೊಟ್ಟಿರುವ ಸ್ಥಳಕ್ಕೆ 4 ಮೈಲಿಗಳ ದೂರದಲ್ಲಿ ಹಳೇಬೀಡಿನಲ್ಲಿ ಒಂದು ಹೈಸ್ಕೂಲಿದ್ದರೂ ಅಲ್ಲಿಗೇಕೊಡಲು ಕಾರಣವೇನು ?

ಶ್ರೀ ಅಣ್ಣಾರಾವ್ ಗಣಮುಖಿ.—ಮೊದಲು ಡಿಪಾಜಿಟ್ ಯಾರು ಮಾಡಿದ್ದರೋ ಅವರಿಗೆ ಕೊಡಲಾಯಿತು.

Sri G. N. PUTTANNA.—The Hon'ble Minister was pleased to say that about two years ago, a sum of Rs. 33,000 was deposited by the place and a high school was sanctioned. Is the Govenment aware that 18 years ago the people in Godakere village, Chicknayakanahalli Taluk deposited about Rs. 20,000 and they have been urging ever since and the Government is denying them a high school ?

Sri ANNARAO GANAMUKHI.—Unless the claimis ripe, unless the deposit is in full, we cannot give the school.

Sri G. N. PUTTANNA.—Have you given any endorsement that Rs. 33,000 should be deposited. But the Government had issued a notice that only Rs. 17,000 was required, and the people of the place had deposited a sum of Rs. 20,000 eighteen years ago. How is it Government have neglected their case and how is it Government are taking action in a case where the n oney has been deposited two years ago ?

Sri ANNARAO GANAMUKHI.—This particular question, if separately put, I will answer. How can I answer to this question, Sir ?

Sri G. N. PUTTANNA.—That is not the answer I expect, Sir.

Mr. SPEAKER.—He expect a certain answer. How can he give the answer expected by the member ?

Sri G. N. PUTTANNA.—When he said that two years ago the amount was deposited and action was taken.....

Mr. SPEAKER.—Please put a particular question and the Hon'ble Minister is prepared to answer such question.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈಗ ಮಾಡುವಾರಬ್ಬೆನ್ನೇನೋ ಮಾಡಿದಿರಿ ಆಗಿದ್ದಾಯಿತು ಹೋದದ್ದು ಹೋಯಿತು ಈಗ ಹೊನ್ನವಳ್ಳಿ ಗ್ರಾಮದವರು ಸ್ಕೂಲುಕಟ್ಟಡಕೊಡಲು ತಯಾರಿದ್ದಾರೆ. ಅಲ್ಲಿಗೆ ಒಂದು ಹೈಸ್ಕೂಲನ್ನು ಕೊಡುತ್ತೀರಾ ?

ಶ್ರೀ ಅಣ್ಣಾರಾವ್ ಗಣಮುಖಿ.—ಆದರೆ ಈಗಿರತಕ್ಕ ಜಿ. ಓ. ಪ್ರಕಾರ ಸಾಧ್ಯವಿಲ್ಲ. ಅವರು ಕಟ್ಟಡ ಮತ್ತು 33 ಸಾವಿರ ರೂ.ಗಳನ್ನು ಕೊಟ್ಟರೂ ಆಗುವುದಿಲ್ಲ.

Sri J. B. MALLARADHYA.—Will the Hon'ble Minister be pleased to place on the Table of the House cases in which Government have themselves departed from their declared policy in the opening of high schools during the term of this Ministry?

Mr. SPEAKER.—He is putting a hypothetical question.

Sri J. B. MALLARADHYA.—No, Sir, there are cases.....

Mr. SPEAKER.—He may ask the Government whether there are no cases.

Sri J. B. MALLARADHYA.—Will the Honourable Minister be pleased to state whether there are no cases where noticeable departures have been made from the accepted policy of the Government in the opening of high schools?

Sri ANNARAO GANAMUKHI.—If a separat question is put whether Government have departed from that policy, we will be able to answer.

Sri J. B. MALLARADHYA. The Hon'ble Minister has stated in his answer to (c) the policy of the Government. The supplementary arises out of that answer. I have asked a speific question whether the Government have departed from their accepted policy.

Sri ANNARAO GANAMUKHI.—I do not think we have departed from our declared policy. If the Hon'ble Member brings to the notice of the Government any particular instance, I will then answer him.

Sri J. B. MALLARADHYA.—Let them say so, Sir. Then I will cite an instance. I want a categorical answer whether there are no cases.

Mr. SPEAKER.—He does not think it conveys the same idea.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನೂ ಸ್ವಲ್ಪ ಇಂಗ್ಲೀಷ್ ಓದಿದ್ದೇನೆ ಸ್ವಾಮಿ. ಅವರು ಹೇಳ ತಕ್ಕದ್ದೂ ಹಾಗೆ ಅರ್ಥಕೊಡುವುದಿಲ್ಲ. ಅವರು ತಮ್ಮ ಪಾಲಿಸಿಗೆ ವಿರೋಧವಾಗಿ ನಡೆದಿಲ್ಲವೆಂದು ಹೇಳಲಿ.

ಅಧ್ಯಕ್ಷರು.—He does not think ಎಂದು ಹೇಳಿದರೆ ಅದರ ಅರ್ಥ ಅವರು ಆ ಪಾಲಿಸಿಗೆ ವಿರೋಧವಾಗಿ ನಡೆದಿಲ್ಲವೆಂದು ಅರ್ಥವಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಆ ರಿತಿ ಅರ್ಥಬರುವುದಿಲ್ಲ, ನಾನೂ ಸ್ವಲ್ಪ ಇಂಗ್ಲೀಷ್ ಓದಿದ್ದೇನೆ, ಅವರು ನೇರವಾದ ಪ್ರಶ್ನೆಗೆ ನೇರವಾದ ಉತ್ತರ ಕೊಡಬೇಕು.